ರಾಜ್ಯದಲ್ಲಿ ಹುಚ್ಚುನಾಯಿ ಕಡಿತಕ್ಕೆ ಉಚಿತ ಔಷಧಿ ವಿತರಣೆ

996 (1270) ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹುಚ್ಚುನಾಯಿ ಕಡಿತಕ್ಕೆ ಉಚಿತ ಔಷಧಿ ವಿತರಣೆಯನ್ನು ಸರ್ಕಾರ ಮಾಡುವುದೇ;

ಆ) ಇದಕ್ಕಾಗಿ ಆಸ್ಪತ್ರೆಗಳಲ್ಲಿ ಔಷಧಿ ಲಭ್ಯವಿದೆಯೇ;

ಇ) ರಾಜ್ಯದ ಯಾವುದಾದರೂ ಭಾಗದಲ್ಲಿ ಸದರಿ ಔಷಧಿ ಲಭ್ಯವಿಲ್ಲದಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಬೆಂಗಳೂರು ಜಿಲ್ಲೆಯಲ್ಲಿ ಔಷಧಿಯ ಕೊರತೆ ಉಂಟಾಗಿರುವುದು ನಿಜವೇ; ಇದಕ್ಕೆ ಸರ್ಕಾರ ಯಾವ ಮುಂಜಾಗರೂಕತೆ ಕ್ರಮ ಕೈಗೊಂಡಿದೆ;

ಉ) ಈ ಔಷಧಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬಳಸಲು ಅವಕಾಶವಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ) ಹೌದು

ಆ) ಇದೆ

ಇ) ಇಲ್ಲ

ಈ) ಇಲ್ಲ

ಉ) ಹೌದು

ರಾಜ್ಯದ ಪ್ಯಾಕೇಜ್ ಸ್ಕೀಂನಡಿಯಲ್ಲಿ ಜಿಲ್ಲಾ ರಸ್ತೆಗಳ ನಿರ್ವಹಣೆ

997 (1271) ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ಯಾಕೇಜ್ ಸ್ಕೀಂನಡಿಯಲ್ಲಿ ಜಿಲ್ಲಾ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಯ ರಸ್ತೆಗಳ ನಿರ್ವಹಣೆಯನ್ನು ಮಾಡುವವರು ಯಾರು;

ಆ) ಈ ಯೋಜನೆಯಡಿ ಸದರಿ ರಸ್ತೆಗಳ ಡಾಂಬರೀಕರಣ ಮಾಡಿರುವುದು ನಿಜವೇ;

ಇ) ಇದಕ್ಕಾಗಿ ಬಿಡುಗಡೆಯಾದ ಮೊತ್ತವೆಷ್ಟು;

ಈ) 2002-03 ನೇ ಸಾಲಿಗೆ ನಿಗಧಿಪಡಿಸಿದ ಅಂದಾಜು ವೆಚ್ಚಗಳ ವಿವರಗಳನ್ನು ಜಿಲ್ಲಾವಾರು ಒದಗಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಪ್ಯಾಕೇಜ್ ಸ್ಕೀಂನಲ್ಲಿ 7300 ಕಿಮೀ. ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ತೆಗೆದುಕೊಳ್ಳಲಾಗಿದೆ.

ಆ) ಈ ಯೋಜನೆಯ ಅಡಿಯಲ್ಲಿ ಒಟ್ಟು 3328.00 ಕಿ.ಮೀ. ರಸ್ತೆಯ ಭಾಗಗಳಿಗೆ ಮರುಡಾಂಬರೀಕರಣ ಮಾಡಲಾಗಿದೆ.

ಇ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ತೆಗೆದುಕೊಳ್ಳಲಾದ 7300 ಕಿಮೀ. ರಸ್ತೆಯ ಮೂರು ವರ್ಷಗಳ ನಿರ್ವಹಣೆಯನ್ನು 215.00 ಕೋಟಿ ರೂ.ಗಳ ಮೊತ್ತದಲ್ಲಿ ತೆಗೆದುಕೊಳ್ಳಲಾಗಿದೆ.

ಈ) ರಾಜ್ಯ ಹೆದ್ದಾರಿಯ ನಿರ್ವಹಣೆಯ ವಿಭಾಗವಾರು ವಿವರಗಳನ್ನು ಲಗತ್ತಿಸಲಾಗಿದೆ.